**ದಿನಾಂಕಃ 12-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಮುಂದುವರೆದ ಪಾಟೀ ಸವಾಲು ಶ್ರೀ ಜಿ.ಎನ್ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಯರ ಪರವಾಗಿಃ-***

ನಿಪಿ-19 ರ ಆಧಾರದಲ್ಲಿ ವಾದಿಯ ಪ್ರತಿನಿಧಿ ಯು.ಸಿ. ಬಂಡಾರಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನಿಪಿ-19 ಕ್ಕೆ ಸದರಿ ಎಸ್.ಹೆಚ್. ಪಕೀರಪ್ಪ ಸಹಿ ಮಾಡಿದ್ದಾರೆ ಎಂದರೆ ಸರಿ. ಪ್ರಸ್ತುತ ದಾವೆ ಸಲ್ಲಿಸುವ ಮೊದಲೆ ಸದರಿ ಪಕೀರಪ್ಪ ಮರಣ ಹೊಂದಿದ್ದರು ಎಂದರೆ ಸರಿ.

ದಾವ ಅನುಸೂಚಿ ಸಿ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿನಲ್ಲಿದೆ, ಇವರೇ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಯಾವಾಗ 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಪ್ರಸ್ತುತ ದಾವೆ ಸಲ್ಲಿಸಿದ ನಂತರ ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಖಾತೆ ಆಗಿರುವುದು ಗೊತ್ತಾಯಿತು. ಪ್ರಸ್ತುತ ದಾವೆ ಸಲ್ಲಿಸುವವರೆಗೂ ದಾವೆ ಅನುಸೂಚಿ ಸಿ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಸದರಿ ಪಕೀರಪ್ಪನವರು ವಾದಿ ಸಂಸ್ಥೆಯಿಂದ ನಿವೃತ್ತರಾಗಿದ್ದಾರೆಂಬುದರ ಬಗ್ಗೆ ನಿಪಿ-17 ಹೊರತಾಗಿ ಬೇರೆ ದಾಖಲೆ ಇಲ್ಲ ಎಂದರೆ ಸರಿ. ಸಂಸ್ಥೆಯ ಪಾಲುದಾರರ ಬಗ್ಗೆ ಲೆಕ್ಕಚಾರ ನಿರ್ವಹಿಸುತ್ತೇವೆ ಮತ್ತು ಆ ಬಗ್ಗೆ ದಾಖಲೆ ಇರುತ್ತವೆ. ಸದರಿ ಪಕೀರಪ್ಪನವರ ಬಾಬ್ತು ಲೆಕ್ಕಾಚಾರದ ಬಗ್ಗೆ ದಾಖಲೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು 24 ವರ್ಷದ ಹಳೆಯ ದಾಖಲೆ ಆಗಿದ್ದರಿಂದ ಅದು ನಮ್ಮ ಬಳಿ ಇಲ್ಲ ಎನ್ನುತ್ತಾರೆ. ವಾದಿ ಸಂಸ್ಥೆ ಮತ್ತು ಸದರಿ ಪಕೀರಪ್ಪನವರ ಮಧ್ಯೆ 2008 ನೇ ಇಸವಿಯಿಂದ ತಕರಾರು

ಇರುವಲ್ಲಿ ಸದರಿ ಅವರ ಬಾಬ್ತು ಲೆಕ್ಕಾಚಾರ ಮತ್ತು ದಾಖಲೆ ಏಕೆ ನಿರ್ವಹಿಸಿಲ್ಲ ಎಂದರೆ ಸಾಕ್ಷಿಯು ಸದರಿ ಪಕೀರಪ್ಪರವರು ನಿವೃತ್ತಿಯಾದ 6 ವರ್ಷಗಳ ವರೆಗೆ ಮಾತ್ರ ಅವರ ಬಾಬ್ತು ದಾಖಲೆ ನಿರ್ವಹಿಸಿದ್ದೆವು, ನಂತರ ಇಲ್ಲ ಎನ್ನುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಅನುಸೂಚಿ ಸಿ ಆಸ್ತಿಯನ್ನು ಯಾರಿಂದ ಖರೀದಿಸಿದ್ದಾರೆ ಎಂದು ಗೊತ್ತೇ ಎಂದರೆ ಸಾಕ್ಷಿಯು ಹೆಚ್.ಎಸ್. ಶಣ್ಮುಖಪ್ಪ ರವರಿಂದ ಎನ್ನುತ್ತಾರೆ. ಸದರಿ ಹೆಚ್.ಎಸ್. ಶಣ್ಮುಖಪ್ಪ ಸದರಿ ಹೆಚ್.ಎಸ್ ಪಕೀರಪ್ಪ ರವರ ಮಗ ಎಂದರೆ ಸರಿ. ನಿಪಿ-20 ರ ಪ್ರಕಾರ 1 ಮತ್ತು 2 ನೇ ಪ್ರತಿವಾದಿಯವರಿಗೆ ಸದರಿ ಹೆಚ್.ಎಸ್. ಶಣ್ಮುಖಪ್ಪ ದಾವಾ ಅನುಸೂಚಿ ಸಿ ಆಸ್ತಿಯನ್ನು ವಾದಿ ಸಂಸ್ಥೆಯ ಪಾಲುದಾರ ಎಂಬ ಸಾಮರ್ಥ್ಯದಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನಿಪಿ-20 ರಲ್ಲಿ ಆ ರೀತಿ ನಮೂದಿದೆ, ಆದರೆ ಅದು ಸುಳ್ಳು ಎನ್ನುತ್ತಾರೆ. ಸದರಿ ಹೆಚ್.ಎಸ್. ಶಣ್ಮುಖಪ್ಪ ರವರು ರಾಘವೇಂದ್ರ ಗೌಡ ಎಂಬುವರಿಗೂ ಒಂದು ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿ, ಸಾಕ್ಷಿ ಆ ರೀತಿ 4 ಆಸ್ತಿಗಳನ್ನು ಮಾರಾಟ ಮಾಡಿದ್ದರು, ಆ ಬಗ್ಗೆ ನಾವು ದಾವೆ ಹೂಡಿ ಆದೇಶ ಪಡೆದಿದ್ದೇವೆ ಎನ್ನುತ್ತಾರೆ. ಸದರಿ ಹೆಚ್.ಎಸ್. ಶಣ್ಮುಖಪ್ಪರವರು ವಾದಿ ಸಂಸ್ಥೆಯ ಪಾಲುದಾರನಲ್ಲ ಎಂಬ ಬಗ್ಗೆ ವಾದಿ ಸಂಸ್ಥೆ ಕ್ರಮ ಕೈಗೊಂಡಿಲ್ಲ ಅಥವಾ ದಾವೆ ಸಲ್ಲಿಸಿಲ್ಲ .

ಸದರಿ ಹೆಚ್. ಎಸ್. ಪಕೀರಪ್ಪ ವಾದಿ ಸಂಸ್ಥೆಯಿಂದ ನಿವೃತ್ತಿಯಾಗಿರಲಿಲ್ಲ, ಅವರ ಮರಣಾ ನಂತರ ಅವರ ಮಗ ಹೆಚ್.ಎಸ್. ಶಣ್ಮುಖಪ್ಪ ಆದೇ ಸಂಸ್ಥೆ ಯಲ್ಲಿ ಪಾಲುದಾರರಾದರು, ವಾದಿ ಮತ್ತು ಸದರಿ ಹೆಚ್.ಎಸ್. ಶಣ್ಮುಖಪ್ಪ ಸೇರಿ 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ಈ ಸುಳ್ಳು ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

O.S. No. 54/2016
PW. - 1

ನಾನು ಹೆಚ್. ಎಸ್. ಪಕೀರಪ್ಪರವರನ್ನು ನೋಡಿಲ್ಲ, ಹೆಚ್.ಎಸ್. ಶಣ್ಮುಖಪ್ಪರವರನ್ನು ನೋಡಿದ್ದೇನೆ.

1 ಮತ್ತು 2 ನೇ ಪ್ರತಿವಾದಿಯರಿಗೆ ಆದ ಖಾತೆಯನ್ನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ. ವಾದಿ ಸಂಸ್ಥೆ 1 ಮತ್ತು 2 ನೇ ಪ್ರತಿವಾದಿಯರನ್ನು ಭೇಟಿ ಮಾಡಿಲ್ಲ. ವಾದಿ ಸೆಂಸ್ಥೆ 1 ಮತ್ತು 2 ನೇ ಪ್ರತಿವಾದಿಯರಿಗೆ ಯಾವುದೇ ನೋಟಿಸು ನೀಡಿಲ್ಲ. ವಾದಿ ಸೆಂಸ್ಥೆಯ ವ್ಯವಹಾರದ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ಜ್ಞಾನ ಇಲ್ಲದೆ ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪ್ರತಿನಿಧಿಯಾಗಿ ದಾವೆ ಸಲ್ಲಿಸಿದ್ದ ಯು.ಸಿ ಭಂಡಾರಿ ಆರೋಗ್ಯವಾಗಿ ಇದ್ದಾರೆ. ಸದರಿ ಯು.ಸಿ ಭಂಡಾರಿ ಯವರು ವಾದಿ ಸಂಸ್ಥೆಯ ಪರವಾಗಿ ದಾವೆ ಸಲ್ಲಿಸಿರುವಲ್ಲಿ ಅವರೇ ಸಾಕ್ಷ್ಯ ನೀಡಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಅಸಲು ದಾವಾ ಸ.33/2016 ರಲ್ಲಿ ಬಿ ಮತ್ತು ಬಿ ಇನ್ಫ್ರಾಟೆಕ್ ಕಂಪನಿಯ ಪರವಾಗಿ ಸಾಕ್ಷ್ಯ ನೀಡಿದ್ದೇನೆ ಎಂದರೆ ಸರಿ.

ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಉಭಯತ್ರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**